Requesting Education Minister to make statement *re* : the affairs of the University of Bangalore

Sri H. N. NANJE GOWDA.—Before going to the next item of the Business, I request the Education Minister to make a statement about the University affairs. He promised that he would come to know of the decision of the University Syndicate and he is likely to inform the House as to what the Government is going to do.

Mr. SPEAKER.—He stated that he would do it tomorrow.

†ಶ್ರೀ ಎಚ್. ಎನ್. ನಂಜೇಗೌಡ.—ಈಗತಾನೆ ಎರಡು ಮೂರು ಜನ ಸದಸ್ಯರು ಹೋಗಿ ನೋಡಿಕೊಂಡು ಬಂದೆವು. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಉಪವಾಸ ಮಾಡುತ್ತಿರುವ ಒಬ್ಬ ವಿದ್ಯಾರ್ಥಿಯು ಪರಿಸ್ಥಿತಿ ಚಿಂತಾಜನಕವಾಗಿದೆ. ಒಂದುವೇಳೆ ಆತನಿಗೆ ಏನಾದರೂ ತೊಂದರೆಯಾದರೆ ಗೊಂದಲವಾಗುವುದು. ಆದುದರಿಂದ ಮಾನ್ಯ ವಿದ್ಯಾ ಮಂತ್ರಿಗಳಿಗೆ ಹೇಳಿಕಳಿಸಿ ಸಂಬಂಧಪಟ್ಟ ಸಮಿತಿಯಲ್ಲಿ ಇದರ ಸಂಬಂಧವಾಗಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಎಂಬ ವಿಷಯವನ್ನು ಈ ಸಭೆಗೆ ತಿಳಿಸುವಂತೆ ಹೇಳಬೇಕು. ಇಂದಿನ ವಾತಾವರಣ ನೋಡಿದರೆ ಪರಿಸ್ಥಿತಿ ಪ್ರಕ್ಷೋಪಕ್ಕೆ ಹೋಗಬಹುದು ಎಂದು ಕಾಣುತ್ತದೆ. ವಿದ್ಯಾರ್ಥಿಗಳು ಗಲಭೆ ಪ್ರಾರಂಭಿಸಿದರೆ ಹತ್ತಿರದಲ್ಲೇ ಪೋಲೀಸಿನವರಿದ್ದಾರೆ, ಅವರು ಗುಂಡು ಹಾರಿಸುವುದು, ಲಾಠಿ ಧಾರ್ಜ್ ಮಾಡುವುದು ಮುಂತಾದ್ದು ಮಾಡಬಹುದು, ಆದರಿಂದ ಬಹಳ ನಷ್ಟವಾಗುವುದು. ಹಾಗಾಗುವುದಕ್ಕೆ ಮುಂಚೆ ಮಾನ್ಯ ವಿದ್ಯಾಮಂತ್ರಿಗಳು ಈ ಸಭೆಗೆ ಬಂದು ಏನು ಮಾಡುವರೆಂಬುದನ್ನು ತಿಳಿಸಿದರೆ ಒಳ್ಳೆಯದು. ಕೊನೆಯ ಪಕ್ಷ ಈಗಲೇ ರಿಜಿಸ್ಟ್ರಾರರು ಎರಡು ತಿಂಗಳು ರಜಾ ಹಾಕಿ ಹೋಗುವುದು ಒಳ್ಳೆಯದು. ಪರಿಸ್ಥಿತಿ ಶಾಂತವಾದಮೇಲೆ ನಿನು ಬೇಕಾದರೂ ಮಾಡಬಹುದು. Let him voluntarily apply for two months' leave. ಹಾಗೆ ಮಾಡಿದರೆ ವಾತಾವರಣ ಸ್ವಲ್ಪ ಶಾಂತವಾಗುವುದಕ್ಕೆ ಅವಕಾಶವಾಗುತ್ತದೆ. ಈಗಿರುವ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ನಮ್ಮ ನಿರುವುದಕ್ಕಾಗುವುದಿಲ್ಲ. ಇವತ್ತು ಪರಿಸ್ಥಿತಿ ನೋಡಿ ಬಂದಮೇಲೆ ನಾನು ಅದನ್ನು ಇಲ್ಲಿ ಹೇಳಲೇಬೇಕಾಯಿತು. ಸ್ಫೋಟಕ ಪರಿಸ್ಥಿತಿ ಎಲ್ಲಿ ಬರುವುದೋ ಎಂಬ ಸಂದೇಹ ಮೂಡುತ್ತಿದೆ. ಮೂರು ಗಂಟೆಯಮೇಲೆ ಹೇಳುವುದಾಗಿ ಮಂತ್ರಿಗಳು ಹೇಳಿದರು. ಆದುದರಿಂದ ಅವರನ್ನು ಕರೆಸಿ ಒಂದು ಹೇಳಿಕೆ ನೀಡುವಂತೆ ತಿಳಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—I heard the statement of the Hon. Minister, He said that the Syndicate will be meeting from 3 O'clock onwards and he will be in a position to say something tomorrow and not today. Therefore, if the meeting is still going on what is the point in asking for it now? I do not know where the Minister is. He is not here. Let us wait. Probably they are also as anxious as you and me.

Mysore Village Panchayats and Local Boards (Amendment) Bill, 1969

Motion to consider.

Sri P. M. NADGOUDA (Minister for Development).—Sir, I move....

Sri K. H. PATIL.—On a point of order.

Mr. SPEAKER.—I understand it. I will read the Order :

" In pursuance of clause 1 and 3 of Art. 207 of the Constitution of India, I, A. R. Somanath Iver, Governor of Mysore, do recommend that the Mysore Village Panchayats and Local Boards (Amendment) Bill, 1969, be introduced and considered by the Mysore Legislative Assembly."

Sri P. M. NADGOUDA.—I move :

" That the Mysore Village Panchayats and Local Boards (Amendment) Bill, 1969, be taken into consideration."

Mr. SPEAKER.—Motion moved :

" That the Mysore Village Panchayats and Local Boards (Amendment) Bill, 1969, be taken into consideration."

Sri D. B. KALMANKAR —We have given amendments.

Mr. SPEAKER.—All the amendments will be circulated and they may be moved in course of time.

Sri K. H. PATIL.—Sir, if you will remember we all opposed this Land revenue and we sat here. The Bill empowers the local bodies to increase the tax by hundred per cent. I for one would say that we should not pass this Bill in such a hurry. Let us have reasonable opportunity to have our say.

Mr. SPEAKER.—It was introduced and sufficient notice was there. Hon. Members have given amendments today. They will be circulated and the hon. members will be at liberty to talk on them. Their right is not taken away.

Sri K. H. PATIL.—What I say is, to move amendments and to understand amendments there must be sufficient time.

Mr. SPEAKER.—Let the consideration stage be over. We shall see.

†Sri S. SIVAPPA.—This is an important measure amounting to taxation, appointment of administrator, etc. I suggested at one stage that this Bill should go to the Joint Select Committee so that we can consider this calmly, and also the amendments intended to be given by the members may be considered by the Joint Committee. I want to know whether the Hon. Minister is agreeable to send this Bill to a Joint Select Committee or he wants this to be passed straightaway here ? If his intention is that this should be passed here without reference to Joint Select Committee, I say great injustice will be done to the tax payers in the State.

Mr. SPEAKER.—The Business Advisory Committee has allotted two hours for this Bill and this report has been accepted by the House. On the last occasion some hon. Members suggested that it should go to the Select Committee and that the Committee should report within a couple of days.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೊದಲನೆಯ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕಬೇಕೆಂದು ತೀರ್ಮಾನವಾದ ಮೇಲೆ ಒಪ್ಪಿಕೊಂಡೆವು. ಶಿವಪ್ಪನವರು, ಹುಚ್ಚ ಮಾಸ್ತಿಗೌಡರು ಎಲ್ಲರೂ ಈ ವಿಚಾರ ಹೇಳಿದ್ದಾರೆ. ಎರಡನೇ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ 2 ಗಂಟೆ ಅಲಾಟ್ ಮಾಡಿದ್ದಾರೆ. ಇದು ಇಡೀ ಮೈಸೂರು ದೇಶದ ಗ್ರಾಮಾಂತರದ ಬಹುಭಾಗದ ಜನರ ಜೀವನವನ್ನು ಮುಟ್ಟುವಂತಹ ವಿಷಯ, ಸಣ್ಣ ವಿಷಯವಲ್ಲ. ಇಷ್ಟು ಕಡಿಮೆ ಕಾಲ ನಿಗದಿ ಮಾಡಿರುವುದು ಸರಿಯಲ್ಲ.

Mr. SPEAKER.—The hon. Member Sri Nanje Gowda has tabled a motion for referring this Bill to a Select Committee but that will arise after the consideration stage is over.

Sri S. SIVAPPA.—There is a difference between a motion by Sri Nanje Gowda and a motion by the Government. The Chair knows the fate of our motions and amendments.

Sri K. H. PATIL.—Why should we hurry through like this and where is the urgency ? By passing this legislation, money will not come tomorrow. It will be undemocratic to hustle it through. We have no objection to refer it to a Select Committee or circulating it for eliciting public opinion.

Sri P. M. NADGOUDA.—Sir, this is a small measure. Hon. Members have expressed views that cent per cent revenue should be transferred to the Panchayat units. Accordingly, Govenment has accepted that decision and we have given power to the local people. I do not know how Sri Patil has argued that it is undemocratic. If the people want to take up more development activities let them do.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ವಿಷಯವನ್ನು ಅಷ್ಟು ಹಗುರವಾಗಿ ಎರಡು ಗಂಟೆಯಲ್ಲಿ ಚರ್ಚೆ ಮಾಡಿ ಮುಗಿಸುವಂತಹದು ಅಲ್ಲ, ಇದರ ಚರ್ಚೆಗೆ ಎರಡು ಗಂಟೆಗಳ ಕಾಲಾವಕಾಶ ಕೊಟ್ಟಿರುವುದು ಸರಿಯಲ್ಲ ಎಂದು ಹೇಳುತ್ತೇನೆ.

†Sri P. M. NADGOUDA.— If the hon. Members hear my introductory speech, I will convince them.

ಮಾನ್ಯ ಸಭಾಪತಿಗಳೇ, ಈ ಒಂದು ಮಹತ್ವದ ಮಸೂದೆಯನ್ನು ಸರ್ಕಾರದವರು ತಂದಿದ್ದಾರೆ. ಇದರಲ್ಲಿ ಎರಡು ಮೂರು ಮುಖ್ಯವಾದ ಅಂಶಗಳು ಇವೆ. ಮೊದಲನೆಯದು ಎಂದರೆ ಮಾನ್ಯ ಸದಸ್ಯರು ಮೇಲಿಂದ ಮೇಲೆ ಹೇಳುತ್ತಿರುವ ವಿಷಯ : ಭೂಕಂದಾಯ. ಇಪತ್ತಿನ ದಿವಸ ಭೂ ಕಂದಾಯವನ್ನು ಪೂರ್ಣವಾಗಿ ತಾಲ್ಲೂಕು ಬೋರ್ಡುಗಳಿಗೆ, ಪಂಚಾಯ್ತಿಗಳಿಗೆ ಕೊಟ್ಟಿದ್ದಾರೆ. ಮಾನ್ಯ ಶಿವಪ್ಪನವರು ಯಾವ ಅಭಿಪ್ರಾಯವನ್ನು ಮೇಲಿಂದ ಮೇಲೆ ಹೇಳುತ್ತಾ ಇದ್ದರೋ ಅದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ, ಹಾಗಿರುವಾಗ ಏಕೆ ಇದಕ್ಕೆ ವಿರೋಧ ಮಾಡುತ್ತಾ ಇದ್ದಾರೋ ತಿಳಿಯದಾಗಿದೆ. ಈ ಒಂದು ಬಿಲ್‌ನ ಪ್ರಕಾರ ಯಾವ ಪಂಚಾಯ್ತಿಗಳಿಗೆ 30 ಪರ್ಸೆಂಟ್ ಕೊಡುತ್ತಾ ಇದ್ದೆವು ಅವಕ್ಕೆ 5 ಪರ್ಸೆಂಟ್ ಡಿಸ್‌ಕ್ರೀಷನರಿ ಗ್ರಾಂಟ್ ಕೊಡುತ್ತಾ ಇದ್ದುದನ್ನು ಈಗ 10 ಪರ್ಸೆಂಟ್ ಮಾಡಿ ಒಟ್ಟು 40 ಪರ್ಸೆಂಟ್ ಕೊಡುತ್ತೇವೆ. ತಾಲ್ಲೂಕು ಬೋರ್ಡು ಅಭಿವೃದ್ಧಿ ಮಂಡಲಿಯವರು ಅಭಿವೃದ್ಧಿ ಕಾರ್ಯಗಳನ್ನು ಚೆನ್ನಾಗಿ ಮಾಡಲಿ ಎಂದು ಹೇಳಿ 5 ಪರ್ಸೆಂಟ್ ಡಿಸ್ಕ್ರೀಷನರಿ ಗ್ರಾಂಟ್ ಕೊಡುತ್ತಾ ಇದ್ದುದನ್ನು 10 ಪರ್ಸೆಂಟ್ ಮಾಡಿದ್ದೇವೆ. ಎಲ್ಲ ಅಧಿಕಾರವನ್ನೂ ತಾಲ್ಲೂಕು ಬೋರ್ಡು ಮಂಡಲಿಯವರಿಗೆ ಕೊಟ್ಟಿದ್ದೇವೆ. ಸರ್ಕಾರದವರು ಹಸ್ತಕ್ಷೇಪ ಮಾಡಲಿಕ್ಕೆ ಬರುವುದಿಲ್ಲ. ಏನಿಮಂ 12 ಪೈಸೆ ಇಟ್ಟುಕೊಂಡು ಟ್ಯಾಕ್ಸ್ ಎಷ್ಟು ಬೇಕಾದರೂ ಹಾಕಬಹುದು ಎಂದರೂ ಕೂಡ ತಾಲ್ಲೂಕು ಬೋರ್ಡ್ ರೆಸಲ್ಯೂಷನ್ ಮಾಡಬೇಕು ಮತ್ತು ಅದಕ್ಕಿಂತ ಮುಂಚೆ ಜನತೆಯನ್ನು ಕೇಳಬೇಕು, ಜನತೆಯ ಅಭಿಪ್ರಾಯಬೇಡ ಅಂತ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ, ತಾಲ್ಲೂಕು ಬೋರ್ಡು ಮಂಡಲಿಯಲ್ಲಿ ಜನತೆಯ ಪ್ರತಿನಿಧಿಗಳು ಇರುತ್ತಾರೆ, ಹೀಗಿರುವಾಗ ಏಕೆ, ಮಾನ್ಯ ಸದಸ್ಯರು ಅಂಜಿಕೆಪಡುತ್ತಾರೋ ತಿಳಿಯುದಾಗಿದೆ. ಅವರು ಯಾವ ರೀತಿ ಒಂದು ಮಾರ್ಗದರ್ಶನ ಮಾಡಬೇಕೋ ಅದನ್ನು ಅವರು ಬೇರೇನೂ

ಮಾಡುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ಅವರೇನು ಶಿಫಾರ್ಸುಗಳನ್ನು ಕಳುಹಿಸುತ್ತಾರೋ ಅವುಗಳನ್ನು ಸರ್ಕಾರದವರು ಮಂಜೂರು ಮಾಡಬೇಕು. ಅವರು ಯಾವ ಒಂದು ತೀರ್ಮಾನವನ್ನೇ ತೆಗೆದುಕೊಳ್ಳಲಿ ಅದನ್ನು ಅವರು ಅಲ್ಲಿರತಕ್ಕ ಜನರ ಅಭಿಪ್ರಾಯದ ಮೇಲೆ ತೆಗೆದುಕೊಳ್ಳಬೇಕಾಗಿರುತ್ತದೆ. ಹಾಗೆ ಅವರಿಂದ ಅಭಿಪ್ರಾಯ ಪಡೆದು ಅವರು ತೀರ್ಮಾನ ಮಾಡಿದ ನಂತರ ಅದನ್ನು ಅನುಮತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಆಗ ನಾವು ಅದನ್ನು ಅಂಗೀಕಾರ ಮಾಡುತ್ತೇವೆ ಎಂಬ ಈ ಮಾತುಗಳನ್ನು ನಾನು ಬಹಳ ವಿಶ್ವಾಸದಿಂದ ತಮಗೆ ಹೇಳುತ್ತಿದ್ದೇನೆ. ಅವರು ಇಷ್ಟಪಟ್ಟರೆ 12 ಪೈಸೆಗಳು ಇರತಕ್ಕ ಕಂದಾಯವನ್ನು 100 ಪೈಸೆಗಳಿಗೆ ಬೇಕಾದರೂ ಏರಿಸಬಹುದು. ಅದು ಅವರ ಪುರ್ಜಿಗೆ ಬಿಟ್ಟಿದ್ದು. ಅವರಲ್ಲಿ ನಾವು ಪ್ರವೇಶಮಾಡುವುದಿಲ್ಲ.

6-00 P.M.

ಇನ್ನು ಎಲೆಕ್ಷನ್ ವಿಚಾರದಲ್ಲಿ ಹೇಳುವುದಾದರೆ ಈವರೆಗೆ 12 ರಿಟ್ ಪೆಟಿಷನ್‌ಗಳು ಅಡ್ಮಿಟ್ಟಾಗಿವೆ. ಈ ವಿಚಾರದಲ್ಲಿಯೂ ಒಂದು ಅಮೆಂಡ್‌ಮೆಂಟನ್ನು ಸರ್ಕಾರದವರು ಇದರಲ್ಲಿ ಸೇರಿಸಿದ್ದಾರೆ. ಒಂದು ವರ್ಷಕಾಲ ಮಾತ್ರ ನಾಮಕರಣ ಮಾಡಿದ ಸದಸ್ಯರು ಯಾವ ಒಂದು ಒಳ್ಳೆಯ ಕೆಲಸವನ್ನು ಮಾಡುವುದಕ್ಕೂ ಅವರಿಗೆ ಮನಸ್ಸಿರುವುದಿಲ್ಲ. ಕಾರಣ ಅವರ ಅವಧಿ ಅಷ್ಟು ಚಿಕ್ಕದಾಗಿರುತ್ತದೆ. ಆದ್ದರಿಂದ ಅವರಲ್ಲಿ ಒಂದು ಕೆಲಸದ ಬಗ್ಗೆ ಮುತವರ್ಜಿ ವಹಿಸುವಂತೆ ಮಾಡತಕ್ಕ ಒಂದು ತಿದ್ದುಪಡಿಯನ್ನು ಇಲ್ಲಿ ಸೇರಿಸಿದೆ.

ಇನ್ನು ಗ್ರಾಮಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡುಗಳಿಗೆ ಸಾಕಷ್ಟು ಹಣದ ವರ್ಮಾನ ವಿರುವಂತೆ ಮಾಡತಕ್ಕ ಉದ್ದೇಶದಿಂದ ಇದರಲ್ಲಿ ಮತ್ತೊಂದು ಅಮೆಂಡ್‌ಮೆಂಟನ್ನು ಸೇರಿಸಿದೆ ಅದೇನೆಂದರೆ—ಆಯಾಯ ತಾಲ್ಲೂಕುಗಳ ಸರಹದ್ದಿನಲ್ಲಿ ನಡೆಯತಕ್ಕ ರಿಲಿಜಿಯಸ್ ಫೇರ್‌ಗಳಿಗೆ ಬರತಕ್ಕ 12 ವರ್ಷಗಳಿಗೆ ಮೇಲ್ಪಟ್ಟ ಎಲ್ಲರ ಮೇಲೂ ಒಂದು ತೆರಿಗೆಯನ್ನು ವಿಧಿಸುವುದಕ್ಕೆ ಹೇಳಿದೆ. ಹಾಕತಕ್ಕ ತೆರಿಗೆ 50 ಪೈಸೆಗಳೆಂದು ಹೇಳಿದ್ದೇವೆ. ಪಂಚಾಯಿತಿಯವರು ಇದರ ಬಗ್ಗೆ ಅವರು ಎಷ್ಟು ಬೇಕಾದರೂ ನಿಗದಿ ಮಾಡಬಹುದು. ಅಂದರೆ ಅದು ಐವತ್ತು ಪೈಸೆಗಳಿಗೆ ಹೆಚ್ಚಿರಬಾರದು.

ಇನ್ನು ಇಲ್ಲಿಯವರೆಗೂ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಕುಡಿಯುವ ನೀರನ್ನು ಆ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮಿನ ಮೂಲಕ ವಿದ್ಯುಚ್ಛಕ್ತಿ ಇಲಾಖೆಯವರು ಒದಗಿಸುತ್ತಿದ್ದರು. ಆಗಯಾರಾದರೂ ಒಬ್ಬ ವ್ಯಕ್ತಿ ಸರ್ಕಾರಕ್ಕೆ ಹಣವನ್ನು ಕಟ್ಟದೆ ನಿಧಾನ ಮಾಡಿದರೆ ಆ ಬೋರ್ಡಿನವರು ಕೂಡಲೇ ಆ ನೀರು ಸರಬರಾಯಿಯನ್ನು ನಿಲ್ಲಿಸುತ್ತಿದ್ದರು. ಈಗ ಅದನ್ನು ತಪ್ಪಿಸಿ ಆ ಹಣವನ್ನು ಕಟ್ಟತಕ್ಕ ಹೊಣೆಯನ್ನು ಸಂಪೂರ್ಣವಾಗಿ ಪಂಚಾಯಿತಿಗಳ ಮೇಲೆ ಹಾಕಲಾಗಿದೆ. ಇನ್ನು ಮುಂದೆ ಇದು ಆ ಪಂಚಾಯಿತಿಗಳ ಮೇಲೆ ಫಸ್ಟ್ ಥಾರ್ಜ್ ಆಗಿರುತ್ತದೆ. ಅದಕ್ಕಾಗಿ ಒಂದು ತಿದ್ದುಪಡಿಯನ್ನು ಇದರಲ್ಲಿ ಸೇರಿಸಲಾಗಿದೆ.

ಈಗ ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿಗಳಿಂದ ಪ್ರಜಾಸತ್ತಾತ್ಮಕವಾದ ತತ್ವಗಳಿಗೆ ಯಾವ ಬಾಧಕವೂ ಬರುವುದಿಲ್ಲ. ಆದ್ದರಿಂದ ನಿರ್ಭರೂ ಈ ತಿದ್ದುಪಡಿ ಮಸೂದೆಗೆ ತಮ್ಮೆಲ್ಲರ ಬೆಂಬಲವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ಈಗತಾನೆ ಶ್ರೀಮಾನ್ ನಾಡಗೌಡರು ತಮ್ಮ ಪ್ರಜಾ ಪ್ರಭುತ್ವದ ಒಂದು ಸ್ಯಾಂಪಲನ್ನು ಹೋಗೆಡವಿದ್ದಾರೆ. ಅವರ ವಾದದಲ್ಲಿ ಅಡಗಿರತಕ್ಕ ತಿರುಳೆಲ್ಲಾ ಸರ್ಕಾರದವರು ಭೂಕಂದಾಯವನ್ನೆಲ್ಲಾ ತಾಲ್ಲೂಕು ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳಿಗೇ ಕೊಟ್ಟುಬಿಡುವುದರಿಂದ ಸದಸ್ಯರೆಲ್ಲರೂ ಈ ತಿದ್ದುಪಡಿ ಮಸೂದೆಗೆ ಬೆಂಬಲ ನೀಡಬೇಕೆಂದು ಹೇಳಿದ್ದಾರೆ. ಒಬ್ಬ ತೀರಾ ದಿಕ್ಕೆಟ್ಟ ಮನುಷ್ಯ ತಾನು ಮಾಡಿದ್ದ ಸಾಲವನ್ನು ತೀರಿಸುವುದಕ್ಕೆ ಇನ್ನೇನೂ ಮಾಡುವುದಕ್ಕೆ ಯತ್ನವಿಲ್ಲದಿದ್ದಾಗ ಅವನು ಪೂರಾ ಹತಾಶನಾಗಿ ತನ್ನ ಆಸ್ತಿಪಾಸ್ತಿಗಳನ್ನೆಲ್ಲಾ ಮಾರಾಟಮಾಡುವುದಕ್ಕೆ ಹೊರಟಂತೆ ಈ ದಿವಸ ಸರ್ಕಾರದವರು ಗ್ರಾಮಪಂಚಾಯಿತಿ ಮತ್ತು ತಾಲ್ಲೂಕ್ ಬೋರ್ಡುಗಳ ಬಗ್ಗೆ ಇವ್ವ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಈ ರೀತಿ ಒಂದು ತಿದ್ದುಪಡಿಕಾನೂನನ್ನು ತರಲು ಹೊರಟಿದ್ದಾರೆ. ಸರ್ಕಾರದವರು ವಿಧಿಸುತ್ತಿರುವ ಆ ಭೂಕಂದಾಯದ ನೀತಿಯೇ ಸರಿಯಲ್ಲ ಎಂದು ನಾವು ವಾದ ಮಾಡುತ್ತಿರುವಾಗ ಸರ್ಕಾರದವರು ಹೊಸದಾಗಿ ತೆರಿಗೆಂದಾಯವನ್ನು ಹಾಕುವುದಕ್ಕೆ ಹೊರಟಿರುವುದು ಬಹಳ ಆಶ್ಚರ್ಯ. ಕಂದಾಯವನ್ನು ಆ ಹೆಸರನ್ನು ತಪ್ಪಿಸಿ ಅದಕ್ಕೆ ಬೇರೆ ಒಂದು ಹೆಸರನ್ನು ಇಡುತ್ತೇವೆಂಬುದು ಇವರ ಪ್ರಜಾ ಪ್ರಭುತ್ವದ ಒಂದು ನೀತಿ! ಇದೆಷ್ಟು ಚೆನ್ನಾಗಿದೆ? ಕಂದಾಯ ರದ್ದುಮಾಡಿ ಎಂದು ನಾವು ಒತ್ತಾಯಮಾಡುತ್ತಿರುವ ಕಾಲದಲ್ಲಿ ಸರ್ಕಾರದವರು ಆ ಸ್ಥಳೀಯ ಸಂಸ್ಥೆಗಳ ಬಗ್ಗೆ ಇದ್ದ ತಮ್ಮ

(ಶ್ರೀ ಎಸ್. ಶಿವಪ್ಪ)

ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಈ ಒಂದು ತಂತ್ರವನ್ನು ಹೂಡಿದ್ದಾರೆ. ಈ ಮಸೂದೆಯನ್ನು ನಾವು ಇಲ್ಲಿ ಕುಳಿತುಕೊಂಡು ಪಾಸ್ ಮಾಡಿದ್ದೇ ಆದರೆ ಕಂದಾಯವನ್ನು ಇಲ್ಲಿ ಸೂಚಿಸಿರುವಂತೆ ಯಾರು ಕೊಡುತ್ತಾರೆ? ನಾಳೆ ದಿವಸ ಯಾರೂ ತೆರಿಗೆಯಲ್ಲಿ ಇಲ್ಲಿ ಸೂಚಿಸಿರತಕ್ಕ ಪ್ರಕಾರ ಕೊಡದೆ ಇದ್ದರೆ ನಾಳೆ ಆ ಸ್ಥಳೀಯ ಸಂಸ್ಥೆಗಳು ಮತ್ತೆ ಸರ್ಕಾರದವರನ್ನು ಕೇಳುವ ಹಾಗಿಲ್ಲ. ಏಕೆಂದರೆ ಸರ್ಕಾರದವರು ಈ ದಿವಸ ಎಲ್ಲಾ ಇವರ ಹೊಣೆಗಾರಿಕೆಯನ್ನೂ ಆ ಸಂಸ್ಥೆಗಳ ಮೇಲೆ ಹೇರುವುದಕ್ಕೆ ಹೊರಟಿದ್ದಾರೆ. ದೇವರು ಮಾನ್ಯ ಸಚಿವರಿಗೆ ಒಳ್ಳೆ ಬುದ್ಧಿಯನ್ನು ಕೊಟ್ಟು ಕೂಡಲೆ ಈ ಮಸೂದೆಯನ್ನು ವಾಪಸ್‌ಪಡೆಯುವಂತೆ ಮಾಡಲೆಂದು ಹಾರೈಸುತ್ತೇನೆ. ಇಲ್ಲವೇ ಅವರು ಇದನ್ನು ಒಂದು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ವಹಿಸಲಿ. ಮೊದಲು ಪ್ರಜಾಪ್ರತಿನಿಧಿಗಳ ಇದರ ಬಗ್ಗೆ ಸರ್ಕಾರ ಸಂಗ್ರಹಣೆ ಮಾಡಲಿ. ಅಧ್ಯಕ್ಷರು ಈಗ ಇಲ್ಲಿ ಇದನ್ನು ಚರ್ಚೆಮಾಡುವುದಕ್ಕೆ ಅವಕಾಶಕೊಡದಂತೆ ನಮ್ಮ ಹಕ್ಕನ್ನು ರಕ್ಷಣೆ ಮಾಡತಕ್ಕ ಬಗ್ಗೆ ಅವರು ಸಹಾಯ ಮಾಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೇಲಾಗಿ ಆ ಭೂತಲಿಂಗಂ ಸಮಿತಿಯೇ ಇನ್ನೂ ಈ ಕಂದಾಯ ಇರಬೇಕೇ ಬೇಡವೇ ಎಂಬ ಬಗ್ಗೆ ಒಂದು ನಿರ್ದಿಷ್ಟ ತೀರ್ಮಾನವನ್ನು ಕೈಗೊಂಡಿಲ್ಲ. ಆದ್ದರಿಂದ ಇದನ್ನು ಚರ್ಚೆ ಮಾಡುವುದಕ್ಕೆ ಇದು ಸಕಾಲವಲ್ಲ ಎಂದು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಚರ್ಚೆಯಲ್ಲಿ ಭಾಗವಹಿಸಬೇಕೆಂದು ನೋಟ್ ಮಾಡಿಕೊಂಡಿದ್ದೆ. ನಮ್ಮ ನಾಯಕರು ಒಂದು ಅಪ್ಪಣೆ ಕೊಟ್ಟಿದ್ದಾರೆ. ಇದು ಸೆಲೆಕ್ಟ್ ಕಮಿಟಿಗೆ ಹೋಗಬೇಕು, ಚರ್ಚೆಮಾಡುವುದು ಬೇಡವೆಂದು. ಈಗ ಮಾನ್ಯ ಶ್ರೀ ಜ್ವಾಲನಯ್ಯನವರು ಒಂದು ಹೊಸ ವಿಷಯವನ್ನು ತಂದಿದ್ದಾರೆ. ಹಣಕಾಸಿನ ಮಂತ್ರಿಗಳು ಭೂತಲಿಂಗಂ ಕಮಿಟಿಯವರು ಭೂಕಂದಾಯವನ್ನು ಸಂಪೂರ್ಣವಾಗಿ ರದ್ದುಮಾಡಿ ಅದಕ್ಕೆ ಬದಲು ಬೇರೆ ರೀತಿಯಲ್ಲಿ ಕಂದಾಯ ಹಾಕೋಣವೆಂಬ ಅಂಶವನ್ನು ತಂದಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಭೂತಲಿಂಗಂ ಕಮಿಟಿಯವರು ರೂರಲ್ ಟ್ಯಾಕ್ಸ್ ವಿಚಾರವಾಗಿ ಏನು ಯೋಚನೆ ಮಾಡಿಲ್ಲ. ಅವರು ಮೊದಲು ಸೇಲ್ಸ್‌ಟ್ಯಾಕ್ಸ್ ಮತ್ತು ಅರ್ಬನ್ ಟ್ಯಾಕ್ಸ್ ವಿಷಯವಾಗಿ ಮಾತನಾಡುತ್ತಿದ್ದಾರೆ. They have not applied their mind to it. It will be too immature to think about the possible recommendation of the Bhoothalingam Committee.

Sri K. H. PATIL.—I want to know from the Hon. Finance Minister whether he can impress upon this House that this Bill is so urgent that it requires suspension of the rules and procedure? If he convinces this House, we will consider it. We have to study it.

Mr. SPEAKER.—I am not suspending any Rule.

Sri RAMAKRISHNA HEGDE.—Sir, may I inform the hon. Member that irrespective of the fact whether land revenue is going to be abolished or retained, or some other tax is going to be levied as a result of the recommendation of the Taxation Enquiry Committee, this amendment is necessary, because Government has already taken a decision to assign cent per cent land revenue to the Taluk Boards and Panchayats, and unless the Act is amended, the Government cannot assign 100 per cent land revenue to the Taluk Boards and Panchayats, and they will be deprived of this, Under the existing Act, only 60 per cent can be assigned. This amendment is in the interest of the local bodies.

Sri K. H. PATIL.—If it is according to you, we would have most willingly welcomed the amendment.

Sri RAMAKRISHNA HEGDE.—There are two important amendments : one is enabling the Government to transfer 100 per cent land reveuue to Taluk Boards and Panchayats, and the second is to enable the Local Bodies, particularly the Taluk Boards, to levy, if they want, a cess not less that 12 per cent but not more than 100 per cent. This is left absolutely to the discretion of the Taluk Board themselves. They are closer to the people than ourselves, and if they think in the interest of speedy development of a particular Taluk and if they decide unanimously or with sufficient majority to levy certain cess, I do not know why we should come in the way ?

Mr. SPEAKER.—Now the position is clear. Whether they are right or wrong, it is not for me to judge.

Sri K. H. PATIL.—We never fetter the Speaker's discretion. Through you, Sir, we are requesting again the Government to study our amendment also.

Mr. SPEAKER.— I am not suspending any rule. Hon. Member's amendments, though late, will be admitted and circulated.

Sri K. H. PATIL.—Supposing the discussion starts now and if I send my amendments tomorrow morning, you may say they are late.

Mr. SPEAKER.—Even now the hon. member may give his amendments and I will admit them.

ಶ್ರೀ ಎಂ. ನಾಗಪ್ಪ.—ತಿದ್ದುಪಡಿಗಳನ್ನು ನಾವು ಇವತ್ತು ಬ್ಯಾಂಡ್ ರೆವಿನ್ಯೂ ಬಗ್ಗೆ ಕೊಡಬೇಕೆಂದು ಹೇಳುತ್ತೀರಿ. ಮರುದಿವಸ ಆ ತಿದ್ದುಪಡಿಗಳು ಅಜೆಂಡಾ ಲಿಸ್ಟ್‌ನಲ್ಲಿ ಇರುವುದಿಲ್ಲ. ಆದ್ದರಿಂದ ಆ ತಿದ್ದುಪಡಿಗಳು ನಾಳೆ ಬರುತ್ತದೋ ಇಲ್ಲವೋ ಎಂದು ಅನುಮಾನ. ನಾವು ಯಾವ ದೃಷ್ಟಿಯಿಂದ ತಿದ್ದುಪಡಿ ಕಳುಹಿಸಬೇಕೆಂದು ಹೇಳುತ್ತೀರಿ ? ಒಂದು ದಿವಸ ಡಿಲೇ ಆದರೆ ತೆಗೆದು ಕೊಳ್ಳುವುದಿಲ್ಲವೆಂದು ಹೇಳುತ್ತೀರಿ. ತಾವು ರೂಲ್ಸ್ ಪ್ರಕಾರ ಒಂದು ದಿವಸ ಮುಂಚೆ ತಿಳಿಸಿದರೆ ಯೋಚನೆ ಮಾಡುತ್ತೇನೆ, ಅದಕ್ಕಾಗಿ 11 ಗಂಟೆಗೆ ಕಳುಹಿಸಿ ಎಂದು ಹೇಳುತ್ತೀರಿ.

Mr. SPEAKER.—I am not disallowing them; I am accepting them. Where is the difficulty when I am not disallowing them ?

Sri K. H. PATIL.—We are thankful to the Chair. But, our friends should know our amendments before discussion.

Mr. SPEAKER.—The hon. Leader of the Opposition said that I should come to their aid. But I cannot say that the Government should act in a particular way. I am here to regulate the proceedings. Let the debate proceed according to rules.

Sri P. M. NADGOUDA.—Sir, let them discuss the Bill.

Sri K. H. PATIL.—If we start discussion today without our amendments, what will be the position? Can we speak twice or thrice ?

Sri S. SIVAPPA.—Amendments are not before us.

Mr. SPEAKER.—At the consideration stage, amendments are not necessary. At the time of clause by clause Consideration, amendments are necessary. We are now at the consideration stage.

Sri S. SIVAPPA.—Even to offer our suggestions on the Bill, we must know what amendments are there.

Sri D. B. KALMANKAR.—Sir, if the amendments are not before the House, the mode of discussion also may change.

Mr. SPEAKER.—Where is it provided that the amendments should be made available at the consideration stage ?

ಶ್ರೀ ಎಚ್. ಬಿ. ಜ್ಞಾಲನಯ್ಯ.—ಯಾವ್ಯಾವ ಸದಸ್ಯರು ಯಾವ್ಯಾವ ತಿದ್ದುಪಡಿಗಳನ್ನು ಕೊಡುತ್ತಾರೆಂಬುದನ್ನು ಚರ್ಚೆ ಮಾಡುವುದಕ್ಕೆ ಮುಂಚೆ ನೋಡಬೇಕು.

Mr. SPEAKER.—Now member may comment on the provisions of the Bill.

Sri K. H. PATIL.—Sir, I rise to a Point of Order. Rule 79 of the Rules of Procedure says :

> " If notice of an amendment to a clause or Schedule of the Bill has not been given one clear day before the day on which the Bill is to be considered, any member may object to the moving of the amendment, and such objection shall prevail..."

Mr. SPEAKER.—Hon. Member is arguing against himself.

Sri K. H. PATIL.—At least one clear day should be at the disposal of all the Members to consider the amendment.

Sri P. M. NADGOUDA.—Sir, who has prevented them from giving amendments ?

Sri K. H. PATIL.—Sir, it is not enough if I know my amendment. At the consideration stage also all the members, who are participating in the debate should know what is the amendment, why it has been brought and what are the pros and cons of the amendment, without which the debate will not be fruitful. For the other two or three Bills, we never raised our single finger. We also understand the responsibility and we are aware of the fact that the time is very precious. By this Bill we are imposing heavy tax on the agriculturists' who are the backbone of the State. We are answerable to them. Therefore, I humbly request the Chair, as the custodian of this House, to uphold my point of order and see that the Bill comes up for consideration only after all the amendments are circulated to the Members as per rule 79. Rule 79 reads thus :

> " 79. (1) If notice of an amendment to a clause or Schedule of the Bill has not been given one clear day before the day on which the Bill is to be considered, any member may object to the moving of the amendment, and such objection shall prevail, unless the Speaker allows the amendment to be moved :
>
> Provided that in the case of a Government Bill an amendment, of which notice has been received from the member in charge, shall not lapse by reason of the fact that the

member in charge has ceased to be a Minister or a member and such amendment shall be printed in the name of the new member in charge of the Bill."

6-30 P.M.

Sir, without the amendments being circulated one day earlier, my Hon. Friends Sri Nagappa or Sri Nanje Gowde cannot understand the spirit of my amendnents.

Mr. SPEAKER.—The Hon. Member is quoting the rule which relates to the clause by clause consideration of the Bills. Amendments are to be circulated to the members before the clause by clause consideration of the Bill is taken up. At the consideration stage, the hon. Members are to discuss only the general principles of the Bill.

Sri H. N. NANJE GOWDA.—Sir, amendments are to be discussed separately after the consideartion of the Bill is complete. I think, we could now start the discussion on the consideration of the Bill.

Mr. SPEAKER.—Yes. Now, let the discussion commence.

†ಶ್ರೀ ಎಸ್. ಶಿವಪ್ಪ.--ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದೆ ಈ ಮನೂದೆಯನ್ನು ಆತುರಾತುರವಾಗಿ ತರುವುದು ಬೇಡವೆಂದು. ಮಾನ್ಯ ಅಭಿವೃದ್ಧಿ ಇಲಾಖೆಯ ಮಂತ್ರಿಗಳಾದ ನಾಡಗೌಡರು ಅಧಿಕಾರಕ್ಕೆ ಬಂದಾಗಿನಿಂದ ಇಂಥ ಅಸಂಬದ್ಧವಾದ ಕಾನೂನುಗಳನ್ನು ಮಾಡುವುದಕ್ಕೆ ಅವರು ನಿಪುಣರು. ಇವತ್ತಿನ ದಿವಸ ತಾಲ್ಲೂಕು ಬೋರ್ಡು ಮತ್ತು ವಿಲೇಜ್ ಪಂಚಾಯಿತ್ ಮನೂದೆಯನ್ನು ತಂದು ಅವರು ಮತ್ತಷ್ಟು ಗೊಂದಲವನ್ನು ಎಬ್ಬಿಸಿದ್ದಾರೆ. ಈಗಾಗಲೇ ಸಾಕಷ್ಟು ಗೊಂದಲ ಅಲ್ಲಿ ಇದೆ. ಅದು ಹೆಸರಿಗೆ ಮಾತ್ರ ಅಭಿವೃದ್ಧಿ ಮಂಡಲಿಯಾಗಿದೆ. ಸರ್ಕಾರದ ಕೈಕೆಳಗಿರತಕ್ಕ ಅಭಿವೃದ್ಧಿ ಮಂಡಲಿಯನ್ನು ಇವರು ಹಾಳುಮಾಡುತ್ತಿದ್ದಾರೆ. ಇವತ್ತು ಪಂಚಾಯಿತಿ ರಾಜ್ಯವು ಪಟೀತಿ ರಾಜ್ಯವಾಗಿಬಿಟ್ಟಿದೆ. ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳನ್ನು ಇವರ ಸ್ವಂತಕ್ಕಾಗಿ ಉಪಯೋಗಿಸುತ್ತಿದ್ದಾರೆ. ಇವರಿಗೆ ಬೇಕಾದಂತಹ ತಾಲ್ಲೂಕುಗಳಿಗೆ ಬೇಕಾದ ಸೌಲಭ್ಯಗಳನ್ನು ಕೊಡುವುದು, ಇವರಿಗೆ ಬೇಕಾದಂತಹ ಪಂಚಾಯಿತಿಗಳಿಗೆ ಹಣ ಕೊಡುವುದು, ಆದರೆ ಬೇಡದವರಿಗೆ ಏನೂ ಕೊಡುತ್ತಿಲ್ಲ. ಇವತ್ತು ಅಭಿವೃದ್ಧಿ ಕಾರ್ಯಗಳನ್ನು ಇವರು ಮಾಡುತ್ತಾ ಇಲ್ಲ. ಇವತ್ತು ಅಡ್ಮಿನಿಸ್ಟ್ರೇಟರ್ ಮಾಡಬೇಕೆಂದು, ಅಮೆಂಡ್‌ಮೆಂಟ್ಸ್ ತಂದಿದ್ದಾರೆ. ಹೋದ ಸಾರಿ ತಾಲ್ಲೂಕು ಬೋರ್ಡಿನ ಚುನಾವಣೆಯನ್ನು ನಾಲ್ಕು ವರ್ಷದೊಳಗೆ ಮಾಡಬೇಕಾಗಿದ್ದುದನ್ನು ಎಂಟು ವರ್ಷ ತೆಗೆದುಕೊಂಡು ಹೋಗಿದ್ದಾರೆ. ನಾವು ಹೇಳಿದ ಮಾತಿಗೆ ಯಾವ ತುಚ್ಛವನ್ನು ಹಾಕಿದ್ದೀರಿ? ಮಾನ್ಯ ನಾಡಗೌಡರು ನಾಲ್ಕು ವರ್ಷದ ಹಿಂದೆ ಇದನ್ನು ತಂದಿದ್ದರೆ ಚೆನ್ನಾಗಿತ್ತು. ಇವತ್ತು ಇವರು ಭೂಕಂದಾಯ ಜಾಸ್ತಿ ಮಾಡಿಬಿಡಿರಿ, ತಲೆಕಂದಾಯ ಹಾಕಿಬಿಡಿರಿ, ಎಂದು ಎಲ್ಲಾ ಸಾರಿಬಿಡುತ್ತಿದ್ದಾರೆ. ಇಷ್ಟು ದುಡ್ಡನ್ನು ಅವರಿಗೆ ಕೊಡುತ್ತೇವೆ, ಇಷ್ಟು ಸಂಚುತ್ತೇವೆಂಬುವನ್ನು ಹೇಳಿದ್ದರೆ ನಾನು ಒಪ್ಪುತ್ತಿದ್ದೆ. ದೇಶದಲ್ಲಿ ಜನರು ಕಷ್ಟಕ್ಕೆ ಈಡಾಗಿ ಕಂದಾಯ ಕೊಡುವುದಕ್ಕೆ ಶಕ್ತಿ ಇಲ್ಲದಿರತಕ್ಕ ಸಂದರ್ಭದಲ್ಲಿ ಅದನ್ನು ಭೂತಲಿಂಗಮ್ ಕಮಿಟಿ ಪರಿಶೀಲನೆ ಮಾಡತಕ್ಕ ಕಾಲದಲ್ಲಿ ಭೂಕಂದಾಯ ನೂರಕ್ಕೆ ನೂರು ಜಾಸ್ತಿ ಮಾಡಿ ಎಂದು ಹೇಳಿದ್ದಾರೆ. ಇದು ಅಸಾಧ್ಯವಾದ ಕೆಲಸ. ನಿಮ್ಮ ಅಭಿವೃದ್ಧಿ ನೀವೇ ಮಾಡಿಕೊಳ್ಳಿ, ನೀವೇ ಸೆಸ್ ಹಾಕಿಕೊಳ್ಳಿ ಎಂದು ಹೇಳುವುದರಲ್ಲಿ ಏನು ನ್ಯಾಯವಿದೆ? ಇವತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಜನರಲ್ಲಿ ಹೋರಾಟ ಮಾಡಿ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ನೀವು ಇವತ್ತು ದೂರ ಇದ್ದೀರಿ. ಇವತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಕಂದಾಯ ಜಾಸ್ತಿ ಮಾಡಿ ಎಂದು ಹೇಳಿದರೆ, ಅಲ್ಲಿರುವ ರೈತ ಅವರ ತಲೆ ಹೊಡೆಯುತ್ತಾನೆ. ಆ ಬಡಪಾಯಿಗಳು, ಅವರ ತಲೆ ಒಡೆಸಿಕೊಳ್ಳಲಿ ಎಂದು ಈ ಕಾನೂನನ್ನು ತಂದಿದ್ದೀರಿ. ಆದ್ದರಿಂದ ಮಾನ್ಯ ನಾಡಗೌಡರು ದಯವಿಟ್ಟು ಈ ಬಿಲ್ಲನ್ನು ವಾಪಸ್ಸು ತೆಗೆದು ಕೊಳ್ಳಬೇಕು, ಇಲ್ಲವೆ ಹೋದರೆ, ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಹಾಕಿ ನಿಧಾನವಾಗಿ ಆಲೋಚನೆ ಮಾಡಿ ಇರತಕ್ಕ ಹಕ್ಕುಬಾಧ್ಯತೆಗಳನ್ನು ಆಳವಾಗಿ ವಿಚಾರ ಮಾಡತಕ್ಕ ವಿಚಾರವನ್ನು ಮಾಡಿ.

(ಶ್ರೀ ಎಸ್. ಶಿವಪ್ಪ)

ನೀವು ಏನು ಮಾಡಿದರೂ ಈ ಬಿಲ್ಲು ಪಾಸಾಗುವುದಿಲ್ಲ. ಇದನ್ನು ಸೆಲೆಕ್ಟ್ ಕಮಿಟಿಗೆ ಹಾಕುತ್ತೇವೆ ಎಂದು ಒಪ್ಪಿಕೊಳ್ಳಿ. ಇದರಿಂದ ಪ್ರಪಂಚವೇನೂ ಕೊಳ್ಳಿ ಹೋಗುವುದಿಲ್ಲ. ಇದರಲ್ಲಿ ಅನೇಕ ಕಷ್ಟಕಾರಿಯಾದ ಕಲಂಗಳು ಇವೆ. ಆದ್ದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಾದರೆ ಅಲ್ಲಿ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟು ಒಳ್ಳೆಯ ಬುದ್ಧಿಯಿಂದ ಒಪ್ಪಿಕೊಳ್ಳಿ ಎಂದು ನಾನು ಹೇಳುತ್ತೇನೆ.

Sri K. H. PATIL.—I rise to a point of order. Rule 68 of the Rules prescribes as to what should be done. It reads as follows :

> " 68 (1) A Bill involving expenditure shall be accompanied by a financial memorandum which shall invite particular attention to the clauses involving expenditure and shall also give an estimate of the recurring and non recurring expenditure involved in case the Bill is passed into law."

I do not know what made my friend Sri Nadgouda to feel that it is not a money Bill. He has not given an account of recurring and non-recurring expenditure. Perhaps due to hurry, he has not given it. The law requires that a memorandum containing the recurring and non-recurring expenditure should be enclosed. Therefore, I appeal through you Sir, to the Hon. Minister to furnish the account of recurring and non-recurring expenditure before he introduces his Bill.

Mr. SPEAKER.—It is already introduced.

Sri P. M. NADGOUDA.—Financial memorandum regarding allocation of funds to different constituents has been furnished. What was being given to Panchayats has been raised to 10 per cent. Accordingly the allocation has been increased to Taluk Boards. Teere is no question of creating posts resulting in recurring expenditure in this Bill.

Mr. SPEAKER.—There is no force in the point of order raised by the hon. Member.

Sri K. H. PATIL.—When the rules say like that, shall we keep quiet watching the proceedings ?

Mr. SPEAKER.—I have ruled there is no point of order.

ಶ್ರೀ ಎಚ್. ಎನ್. ನಂಜೇಗೌಡ.—ಇದರಲ್ಲಿ ನಾನ್ ರೆಕರಿಂಗ್ ಎಕ್ಸ್‌ಪೆಂಡಿಚರ್ ಇಲ್ಲ ಎಂದು ರೂಲಿಂಗ್ ಕೊಡಬಹುದಲ್ಲವೇ ?

Sri K. H. PATIL.—Is that the way how the rules should be respected ? Rules have not been followed. Why should there be rules ? I do not mean to say that your ruling should be disrespected. What I am submitting is that the rules should be respected.

Mr. SPEAKER.—The rules are completely followed. There is no irregularity.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದರು ಎನ್ನುವುದನ್ನು ನಾನು ವಿವರಣೆ ಮಾಡಿ ಹೇಳುತ್ತೇನೆ.

Sri A. P. APPANNA (Deputy Minister for Industries).—The point raised by the hon. Member Sri K. H. Patil is being clarified. Unless the point is cleared what is the meaning in Sri Nanje Gowda's clarification?

Mr. SPEAKER.—Sri Shivappa has made a speech commenting upon the Bill. Why should the hon. Member borrow his point? No repetition is permitted. You follow your own points. If he wants to criticise he may do so.

† ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ಮೈಸೂರು ವಿಲೇಜ್ ಪಂಚಾಯಿತಿ ಅಂಡ್ ಲೋಕಲ್ ಬೋರ್ಡ್ಸ್ ಅಮೆಂಡ್‌ಮೆಂಟ್ ಬಿಲ್ಲಿನಮೇಲೆ ನಾನು ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುವಂಥಾ ಸಮಯದಲ್ಲಿ ಶ್ರೀಮಾನ್ ನಾಡಗೌಡರೂ ಇದ್ದಾರೆ. ಶ್ರೀಮಾನ್ ಬಿ. ಎಲ್. ಗೌಡರೂ ಇದ್ದಾರೆ. ಅವರು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಹೇಳಿದ ಮಾತನ್ನಾದರೂ ಕೇಳಿದಮೇಲೆ ಅವರಿಗೆ ಸರಿಯಾದ ಜ್ಞಾನ ಬಂದು ಅವರು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಈ ಮಸೂದೆಯನ್ನು ಏತಕ್ಕೆ ವಾಪಸ್ಸು ತೆಗೆದುಕೊಳ್ಳಬೇಕು ಎಂದರೆ ಇದನ್ನು ಸಾರ್ವಜನಿಕರ ಅಭಿಪ್ರಾಯಕ್ಕೆ ಕಳುಹಿಸಬೇಕು. ಇಲ್ಲದಿದ್ದರೆ ಕೊಯ್ತ ಪಕ್ಷ ಸೆಲೆಕ್ಟ್ ಕಮಿಟಿಗಾದರೂ ಇದನ್ನು ಹಾಕಬೇಕು. ಈ ಮಸೂದೆಯಲ್ಲಿರತಕ್ಕ 4-5 ವಿಷಯಗಳನ್ನು ಈ ಸಭೆಯ ಗಮನಕ್ಕೆ ತಂದರೆ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಹಾಯಕವಾಗುತ್ತದೆ ಎಂದು ನನ್ನ ನಂಬಿಕೆ. ಈ ಮಸೂದೆಯಲ್ಲಿ ಕ್ಲಾಜ್ (೮) ಸಬ್ ಕ್ಲಾಜ್ 1 ರಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದರಲ್ಲಿ ಯಾವುದಾದರೂ ಒಂದು ಟೌನ್ ಅಥವಾ ಪಂಚಾಯಿತಿ ಲಿಮಿಟ್‌ನಲ್ಲಿ ಯಾವುದಾದರೂ ಒಂದು ಜಾತ್ರೆ, ಅಥವಾ ಉರುಸ್ ಇತ್ಯಾದಿಗಳು ನಡೆದಾಗ ಆ ಪ್ರದೇಶಕ್ಕೆ ಪ್ರವೇಶ ಮಾಡತಕ್ಕವರಿಗೆ 12 ವರ್ಷಕ್ಕೆ ಮೇಲ್ಪಟ್ಟವರಿಗೆ 50 ಪೈಸಾ ತಲೆಗಂದಾಯವನ್ನು ಹಾಕಿದ್ದಾರೆ. ಇಂಥಾ ಒಂದು ಪ್ರಾವಿಜಿನ್ ನೋಡಿದಾಗ ಬಹುಶಃ ಶ್ರೀಮಾನ್ ನಾಡಗೌಡರು ತಮ್ಮ ಮಂತ್ರಿಪದವಿಗೆ ರಾಜೀನಾಮೆಯನ್ನು ಕೊಡುತ್ತಾರೋ ಏನೋ ಎನಿಸಿತು. ಎರಡನೆಯದಾಗಿ ಒಂದು ವೇಳೆ ಅವರು ರಾಜೀನಾಮೆಯನ್ನು ಕೊಡದಿದ್ದರೆ ಸದ್ಯಕ್ಕಾದರೂ ಟೂರ್ ಹೋಗುವುದನ್ನು ನಿಲ್ಲಿಸುತ್ತಾರೆ ಎಂದು ಅರ್ಥವಾಯಿತು. ತಲೆಗಂದಾಯವನ್ನು ಹಾಕಿ ತೊಗಲಕ್ ದರ್ಬಾರ್ ಮಾಡುವುದಕ್ಕೆ ಹೊರಟರೆ ಇವರು ಅಧಿಕಾರದಲ್ಲಿ ಇರುತ್ತಾರೆ ಎನ್ನುವ ನಂಬಿಕೆ ಇದೆಯೇ? ಇವರು ಈ ರೀತಿ ಮಾಡುವುದಾದರೆ ಇವರು ಜನಗಳಿಂದ ಟೀಕೆ ಟಿಪ್ಪಣಿಯನ್ನು ಕೇಳಬೇಕಾಗುತ್ತದೆ. ಇವರು ಟೂರ್ ಹೋಗುವುದನ್ನು ನಿಲ್ಲಿಸಬೇಕು. ಇವರು ಟೂರ್ ಹೋಗತಕ್ಕಂಥ ಕಾರು ಮತ್ತು ಅದರ ರಿಪೇರಿಗಾಗಿ ಜನತೆಯ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಅದಕ್ಕಾಗಿ ಬಜೆಟ್ಟಿನಲ್ಲಿ ಪ್ರಾವಿಜಿನ್ ಮಾಡಿದ್ದಾರೆ. ಇದು ಸರಿಯೇ? ಇವರು ಇವೊತ್ತು ಜನತೆಯಮೇಲೆ 10ಕ್ಕೆ 100ರಷ್ಟು ತೆರಿಗೆಯನ್ನು ವಿಧಿಸಿದ್ದಾರೆ. ನಾನಾ ರೀತಿಯಲ್ಲಿ ಜನತೆಯಮೇಲೆ ತೆರಿಗೆಯ ಹೊರೆಯನ್ನು ಹೊರಿಸಿದ್ದಾರೆ. ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರನ್ನು ಮಿಸ್ ಇಂಟರ್‌ಪ್ರಿಟ್ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಭೂಕಂದಾಯವನ್ನು ಜಾಸ್ತಿ ಮಾಡಿ ಎಂದು ನಮ್ಮ ನಾಯಕರು ಹೇಳಲಿಲ್ಲ. ಭೂಕಂದಾಯದ ವಿಕೆಯ ಬಗ್ಗೆ ನಮ್ಮ ನಾಯಕರು ಹಾಗೂ ನಮ್ಮ ವಿರೋಧಪಕ್ಷದ ಸದಸ್ಯರು ಪ್ರತಿಭಟನೆ ಮಾಡಿ ಈ ಸಭಾಭವನದೊಳಗಡೆ ಧರಣಿ ಮುಷ್ಕರವನ್ನು ಮಾಡಿದ್ದು ಎಲ್ಲರಿಗೂ ನೆನಪಿರಬಹುದೆಂದು ಕಾಣುತ್ತದೆ. ಶಿವಪ್ಪನವರು ಯಾವಾಗಲೂ ಸಹ ಭೂಕಂದಾಯವನ್ನು ಹೆಚ್ಚು ಮಾಡಿ ಎಂದು ಸರ್ಕಾರಕ್ಕೆ ಹೇಳಿರಲಿಲ್ಲ. 10 ಕ್ಕೆ 100ರಷ್ಟು ಸೆಸ್ಸನ್ನು ಭೂಕಂದಾಯದಮೇಲೆ ಹಾಕಿ, ಅದರಿಂದ ಬರುವ ಪರಮಾನವನ್ನು ಸ್ಥಳೀಯ ಸಂಸ್ಥೆಗಳಿಗೆ ಕೊಡಿ ಎಂದು ಕೂಡ ಅವರು ಹೇಳಿರಲಿಲ್ಲ. ಆದಕಾರಣ ಈ ಮಾತನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳಬೇಕು. 12 ವರ್ಷದ ಮೇಲ್ಪಟ್ಟವರಿಗೆ ತಲೆಗಂದಾಯ ಹಾಕುವುದಕ್ಕೆ ಈ ತಿದ್ದುಪಡಿಯಲ್ಲಿ ಅವಕಾತ ಕೊಟ್ಟಿದ್ದಾರೆ. ಬೇಕಾಗಿದ್ದರೆ ಇವರು 12 ವರ್ಷದ ಕೆಳಗಿನವರಿಗೂ ಸಹ ಹಾಕಬಹುದಿತ್ತು. ಮತ್ತೂ ಬೇಕಾಗಿದ್ದರೆ ಗರ್ಭಿಣಿ ಹೆಂಗಸರಮೇಲೆ ಎರಡರಷ್ಟು ತಲೆಗಂದಾಯ ಹಾಕಬಹುದಾಗಿತ್ತು. ಇದನ್ನು ಏತಕ್ಕೆ ಕೈಬಿಟ್ಟರು ಎಂದು ನನಗೆ ತಿಳಿಯುತ್ತಿಲ್ಲ. ಈ ರೀತಿ ಮಾಡದಿರುವುದು ಬಹಳ ತಪ್ಪಾಯಿತು. ನಿಮ್ಮ ಒಂದು ವಿಶಾಲ ಹೃದಯವನ್ನು ಪಸರಿಸಿ ಗರ್ಭಧಾರಣೆ ಮಾಡಿದ ಹೆಂಗಸರಮೇಲೂ ಸಹ ಈ ತೆರಿಗೆಯನ್ನು

(ಶ್ರೀ ಎಚ್. ಎನ್. ನಂಜೇಗೌಡ)

ಎರಡರಷ್ಟು ಹಾಕಿದ್ದರೆ ಇಡೀ ದೇಶ ಮೆಚ್ಚುತ್ತಾ ಇತ್ತು. ಮತ್ತು ಈ ಕಾಂಗ್ರೆಸ್ ಸರ್ಕಾರ ತೊಗಲಕ್ಕನ ರಾಜ್ಯವನ್ನೂ ಮೀರಿಸಿ ಅವನ ತಾತನಾಗುವ ಹೆಸರನ್ನು ಪಡೆಯುತ್ತಿತ್ತು.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಗರ್ಭಿಣಿ ಹೆಂಗಸರಮೇಲೆ ಎರಡರಷ್ಟು ತಲೆ ಕಂದಾಯ ಹಾಕಬಹುದೆಂದು ಮಾನ್ಯ ಸದಸ್ಯರು ಹೇಳಿದರು. ಒಂದು ಪಕ್ಷ ಗರ್ಭಿಣಿಯ ಹೊಟ್ಟೆಯಲ್ಲಿ ಎರಡು ಮಕ್ಕಳು ಇದ್ದರೆ ?

ಶ್ರೀ ಎಚ್. ಎನ್. ನಂಜೇಗೌಡ.—ಅದನ್ನು ಪರೀಕ್ಷೆ ಮಾಡಲು ಬೇಕಾದರೆ ಎರ್ಲಾ ಪಂಚಾಯಿತಿಗಳಲ್ಲಿಯೂ ಒಬ್ಬೊಬ್ಬ ಲೇಡಿ ಡಾಕ್ಟರನ್ನು ನೇಮಕ ಮಾಡಲಿ. ಎರಡು ಮಕ್ಕಳು ಇವೆ ಎಂದು ಅವರು ರುಜುವಾತು ಮಾಡಿದರೆ ಅಂತಹ ಗರ್ಭಿಣಿ ಹೆಂಗಸರಮೇಲೆ ಮೂರಷ್ಟು ತಲೆ ಗಂದಾಯವನ್ನು ಹಾಕುವುದಕ್ಕೆ ಈ ತಿದ್ದುಪಡಿಯಿಂದ ಅವಕಾಶವಾಗುತ್ತದೆ.

ಅಧ್ಯಕ್ಷರು.—12 ವರ್ಷದ ಮೇಲ್ಪಟ್ಟವರಿಗೆ ತಲೆಕಂದಾಯ ಹಾಕಬೇಕೆಂದು ಇದರಲ್ಲಿ ಹೇಳಿರುವುದರಿಂದ, ತಾವು ಹೇಳುತ್ತಿರುವ ವಿಷಯಕ್ಕೆ ಈ ತಿದ್ದುಪಡಿ ಅನ್ವಯವಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಹೇಳುತ್ತಿರುವುದು, 12 ವರ್ಷದ ಕೆಳಗಿನವರಿಗೂ ಸಹ ಹಾಕಿದ್ದಾರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತಿತ್ತು ಎಂಬುದಾಗಿ. ಅಲ್ಲದೆ ಗರ್ಭಿಣಿ ಹೆಂಗಸಿನ ಹೊಟ್ಟೆಯಲ್ಲಿ ಎರಡು ಮಕ್ಕಳು ಇದ್ದರೆ ಅಂತಹವರಮೇಲೆ ಒಂದೂವರೆ ರೂಪಾಯಿ ತಲೆ ಕಂದಾಯ ಹಾಕುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಂ. ನಾಗಪ್ಪ.—ಒಂದೂವರೆ ರೂಪಾಯಿ ತಲೆಗಂದಾಯ ಕೊಟ್ಟು ನಾಳೆ ಒಂದು ಪಕ್ಷ ಎರಡು ಮಕ್ಕಳ ಬದಲು ಒಂದೇ ಮಗು ಹುಟ್ಟಿದರೆ ಏನು ಮಾಡುವುದು ?

7-00 P.M.

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರದಿಂದ ಹಣ ವಾಪಸ್ ಪಡೆಯಲು ಕೋರ್ಟಿಗೆ ಹೋಗಬೇಕಾಗುತ್ತದೆ. ಈ ರೀತಿಯಲ್ಲಿ ಎಲ್ಲರಿಗೂ ತಲೆಗಂದಾಯವನ್ನು ಹಾಕಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ನಾವು ಅನೇಕ ಸಲ ಹೇಳಿದ್ದೇವೆ, ಏನೆಂದರೆ ನಿಮ್ಮ ತೂಕಕ್ಕೆ ಸರಿಹೊಂದುವ ಬಿಲ್‌ಗಳನ್ನು ಮಾತ್ರ ಸಭೆಯಮುಂದೆ ತೆಗೆದುಕೊಂಡು ಬನ್ನಿ ಎಂಬುದಾಗಿ. ಆದರೆ ನೀವು ಮೂಲ ಮಸೂದೆಗೆ ಸಂಬಂಧಪಡದ ತಿದ್ದುಪಡಿಗಳನ್ನೇ ತರುತ್ತಿದ್ದಾರೆ. ಮೂಲ ಮಸೂದೆಯಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದರಿಂದ ಏನಾದರೂ ಕಷ್ಟಗಳು ಆಗುತ್ತಿದ್ದರೆ ಅಂತಹ ಸಮಯದಲ್ಲಿ ತಿದ್ದುಪಡಿಯನ್ನು ತರುವುದು ಸೂಕ್ತ. ಮತ್ತು ಆ ರೀತಿ ತರುವುದು ಒಂದು ರೂಢಿ. ಆದರೆ ಈ ಸರ್ಕಾರದವರು ತಮ್ಮ ಮನಸ್ಸಿಗೆ ಬಂದಾಗಲೆಲ್ಲಾ ತಿದ್ದುಪಡಿಗಳನ್ನು ಸಭೆಯಮುಂದೆ ತಂದು ಜನರಿಗೆ ಇಲ್ಲದ ತೊಂದರೆ ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಗ್ರಾಮಪಂಚಾಯಿತಿಗಳ ವರಮಾನ ಹೆಚ್ಚಿಸಲು ಈ ತಿದ್ದುಪಡಿಯನ್ನು ತರಲಾಗಿದೆ ಎಂದು ಹೇಳಿದ್ದಾರೆ. ಆದರೆ ಗ್ರಾಮಪಂಚಾಯಿತಿಗಳೇ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅನೇಕ ಗ್ರಾಮಪಂಚಾಯಿತಿಗಳಲ್ಲಿ ಕೋರಂ ಇಲ್ಲದೆ ಸಭೆಗಳೇ ನಡೆಯುತ್ತಿಲ್ಲ. ಒಂದು ಪಂಚಾಯಿತಿಯಲ್ಲಿ 15 ಜನ ಸದಸ್ಯರು ಇದ್ದರೆ, ಸಭೆ ನಡೆಸಲು 8 ಜನ ಅಂದರೆ ಅರ್ಧಕ್ಕಿಂತ ಜಾಸ್ತಿ ಇರಬೇಕಾಗುತ್ತದೆ. ಮತ್ತು ಚೇರ್‌ಮನ್‌ರನ್ನು ತೆಗೆದುಹಾಕಬೇಕಾದರೆ 11 ಜನ ಸದಸ್ಯರು ಅಂದರೆ ಮೂರನೇ ಎರಡು ಭಾಗದಷ್ಟು ಇರಬೇಕು. ಒಟ್ಟನಲ್ಲಿ ಹೇಳುವುದಾದರೆ 8 ಜನ ಇಲ್ಲದೆ ಸಭೆ ನಡೆಯುವ ಹಾಗಿಲ್ಲ, 11 ಜನ ಇಲ್ಲದೆ ಚೇರ್‌ಮನ್ನರನ್ನು ತೆಗೆಯುವುದಕ್ಕಾಗುವುದಿಲ್ಲ. ನನ್ನ ತಾಲ್ಲೂಕಿನ 5 ಪಂಚಾಯಿತಿಗಳ ಪರಿಸ್ಥಿತಿ ಇದೇ ಆಗಿದೆ. ಸದಸ್ಯರುಗಳಲ್ಲಿ ಒಗ್ಗಟ್ಟು ಯಾವಾಗ ಇರುವುದಿಲ್ಲವೋ ಆಗ ಪಂಚಾಯಿತಿ ಕೆಲಸಗಳು ಸಹ ಸರಿಯಾಗಿ ನಡೆಯುವುದಿಲ್ಲ. ಕಾಲಕ್ಕೆ ಸರಿಯಾಗಿ ಸಭೆ ಸೇರಿದ್ದರೆ, ಮುಂದೆ ಚೇರ್‌ಮನ್ ತನಗೆ ಇಷ್ಟಬಂದಂತೆ ಆಡಳಿತ ನಡೆಸಬಹುದು. 11 ಜನ ಸದಸ್ಯರು ಒಗ್ಗಟ್ಟಾಗದ ಹೊರತು ಚೇರ್‌ಮನ್‌ರನ್ನು ತೆಗೆಯುವುದಕ್ಕಾಗುವುದಿಲ್ಲ. ಅಂತೂ ಈ ಪಂಚಾಯಿತಿಗಳ ಸ್ಥಿತಿ ಹುಚ್ಚು ಬಿಡುವವರೆಗೂ ಮದುವೆಯಾಗುವಹಾಗಿಲ್ಲ, ಮದುವೆಯಾಗುವವರೆಗೆ ಹುಚ್ಚು ಬಿಡುವಹಾಗಿಲ್ಲ ಎಂಬಂತಾಗಿದೆ. ಸದಸ್ಯರುಗಳಲ್ಲಿ ಒಗ್ಗಟ್ಟು ಯಾವಾಗ ಇರುವುದಿಲ್ಲವೋ ಆಗ ಪಂಚಾಯಿತಿಗಳ ಕೆಲಸವೂ ಕೂಡ ಸರಿಯಾಗಿ ನಡೆಯುವುದಿಲ್ಲ. ಶ್ರೀಮಾನ್ ನಾಡಗೌಡರು ಒಳ್ಳೆಯ ಜನ. ಅವರಿಗೆ ಕೆಲವು ಸಾರಿ ಒಳ್ಳೆಯ ಸಮುದ್ದಿ ಬರುತ್ತದೆ. ಕೆಲವು ಸಾರಿ ಇಂತಹ ತಿದ್ದುಪಡಿಗಳನ್ನು

ತಂದು ತೊಗಲಕ್ ಆಗುವುದಕ್ಕೆ ಇಷ್ಟಪಡುತ್ತಾರೆ. ಇಂತಹ ತಿದ್ದುಪಡಿಗಳನ್ನು ತರುವುದು ಒಳ್ಳೆಯದಲ್ಲ, ಇದರಿಂದ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ತಮಗೆ ಇಷ್ಟಬಂದಂತೆ ಸೆಸ್ಸನ್ನು ಹಾಕುವುದಕ್ಕೆ ಹೊರಟಿದ್ದೀರಿ. ಸೆಕ್ಷನ್ 163ರಲ್ಲಿ ಹೇಳಿರುವಂತೆ ಸೆಸ್‌ನಿಂದ ಬರುವ ಆದಾಯವನ್ನು ತಾವೇ ವಸೂಲಿ ಮಾಡಿ ತಾಲ್ಲೂಕ್ ಬೋರ್ಡ್‌ಗಳಿಗೆ ಕೊಡುತ್ತಿದ್ದರಿ. ಈಗ ಸೆಸ್ಸನ್ನು ವಸೂಲಿ ಮಾಡುವ ಅಧಿಕಾರವನ್ನು ಈ ತಿದ್ದುಪಡಿಯಲ್ಲಿ ಹೇಳಿರುವಂತೆ ತಾಲ್ಲೂಕ್ ಬೋರ್ಡ್‌ಗಳಿಗೇ ವಹಿಸಿರುವುದಲ್ಲದೆ ಸೆಸ್ಸನ್ನು 100ಕ್ಕೆ 100ರಷ್ಟು ಹೆಚ್ಚು ಮಾಡಲು ಅವರಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ. ಇಲ್ಲಿ ಏರಿಯಾವೈಸ್ ಎಂಬುದಾಗಿ ಮಾಡಿಲ್ಲ. ಮತ್ತು ಯಾವ ಯಾವ ಭಾಗದಲ್ಲಿ ಸೆಸ್ಸನ್ನು 100ಕ್ಕೆ 100ರಷ್ಟು ಹೆಚ್ಚು ಮಾಡಬೇಕು ಎಂಬುದನ್ನು ಇಲ್ಲಿ ಹೇಳಿಲ್ಲ. ಇದರಿಂದ ಶ್ರೀ ನಾಡಗೌಡರಿಗೇ ಅನುಕೂಲವಾಗಬಹುದು. ಅವರಿಗೆ ಓಟು ಕೊಡದ ಏರಿಯಾದವರಮೇಲೆ ಇಲ್ಲದ ಅಬ್ಜೆಕ್ಷನ್ನನ್ನು ರೈಸ್ ಮಾಡಿ ಅವರಮೇಲೆ 100ಕ್ಕೆ 100ರಷ್ಟು ಸೆಸ್ಸನ್ನು ಹೆಚ್ಚು ಮಾಡುವುದಕ್ಕೆ ಇದರಿಂದ ಅವಕಾಶ ಸಿಗುತ್ತದೆ. 40 ರೂಪಾಯಿ ಕಂದಾಯ ಕೊಡುತ್ತಿದ್ದವನನ್ನು 80 ರೂಪಾಯಿ ಕೊಡು ಎಂದು ಕೇಳುವುದಕ್ಕೆ ಈ ತಿದ್ದುಪಡಿಯಿಂದ ಅವಕಾಶವಾಗುತ್ತದೆ.

ಇದರಲ್ಲಿ ಎದುರು ಪಕ್ಷದವರನ್ನು ಬಗ್ಗು ಬಡಿಯುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ. ಏಕೆಂದರೆ ಇದು ಸರಿಯಾಗಿ ಡ್ರಾಫ್ಟ್ ಮಾಡಿ ತಂದಿಲ್ಲ. ಇದರಲ್ಲಿ ಇನ್ನೂ ಒಂದು ಅಧಿಕಾರವನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಡುತ್ತಿದ್ದಾರೆ. ಅದು ನೂರಕ್ಕೆ ನೂರರಷ್ಟು ಟ್ಯಾಕ್ಸನ್ನು ಜನತೆಯಮೇಲೆ ಹೊರಿಸಬಹುದು ಎಂದು ಮಾಡಿರುವುದರಿಂದ ಜನರನ್ನು ಶೋಷಣೆ ಮಾಡುವುದಕ್ಕೆ ಒಂದು ದಾರಿ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳಾದ ಶ್ರೀ ನಾಡಗೌಡರಲ್ಲಿ ನಾನು ಸಲಹೆ ಮಾಡುತ್ತಿರುವುದು ಈಗ ಈ ಬಿಲ್ಲನ್ನು ವಾಪಸು ತೆಗೆದುಕೊಂಡು ಮುಂದೆ ಸರಿಯಾಗಿ ಡ್ರಾಫ್ಟ್ ಮಾಡಿದ ಒಂದು ಬಿಲ್ಲನ್ನು ತಂದು ಆಗ ನಮ್ಮ ಒಪ್ಪಿಗೆ ಕೇಳಿದರೆ ಕೊಡಬಹುದು. ಆದುದರಿಂದ ದಯವಿಟ್ಟು ಇದನ್ನು ವಾಪಸು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಅಧ್ಯಕ್ಷರು.—ಸಭೆ ಈಗ ಎದ್ದು ಮತ್ತೆ ನಾಳೆ ಒಂದು ಗಂಜೆಗೆ ಸಮಾವೇಶಗೊಳ್ಳುತ್ತದೆ.

The House adjourned at Five Minutes past Seven of the Clock to meet again at One of the Clock on Tuesday the 9th September, 1969.